ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ ಸಭೆ/k5/2021-22 ದಿನಾಂಕ: 15.06.2021

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 30.03.2021 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.**

***

ದಿನಾಂಕ: **30.03.2021** ರಂದು ಪೂರ್ವಾಹ್ನ 1.30 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ/2021-22** **ದಿನಾಂಕ: 12.04.2021**

ದಿನಾಂಕ 30.03.2021 ರಂದು ಅಪರಾಹ್ನ 1.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.

**ದಿನಾಂಕ 30.03.2021 ರಂದು ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎನ್. ನರಸಿಂಹಮೂರ್ತಿ | ಸಭಾಧ್ಯಕ್ಷರು |
| 2. | ಡಾ: ಹೆಚ್. ಟಿ. ಅರವಿಂದ್ | ಸದಸ್ಯರು |
| 3. | ಶ್ರೀ ಹೆಚ್. ಆರ್. ಸತೀಶ್ | ಸದಸ್ಯರು |
| 4. | ಪ್ರೊ. ಕೆ. ರಮೇಶ್ | ಸದಸ್ಯರು |
| 5. | ಡಾ: ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 6. | ಡಾ: ಪಿ.ವಿ. ಪದ್ಮಜಾ | ಸದಸ್ಯರು |
| 7. | ಶ್ರೀ ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 8. | ಶ್ರೀ ಹೆಚ್. ಎನ್. ಹರಿಪ್ರಸಾದ | ಸದಸ್ಯರು |
| 9. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 10. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಡಾ: ಆರ್.ಕೆ. ಚಂದ್ರನಾಥ್ | ಸದಸ್ಯರು |
| 12. | ಡಾ. ವಿ. ಗಾಯತ್ರಿ | ಸದಸ್ಯರು |
| 13. | ಪ್ರೊ: ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 14. | ಶ್ರೀಮತಿ ಆರತಿ ಆನಂದ್, ಕೆ.ಎ.ಎಸ್<br>(ಹಿರಿಯ ಶ್ರೇಣಿ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

**ವಿಷಯ ಸಂಖ್ಯೆ: 01 : ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಅನುಮೋದಿಸುವ ಬಗ್ಗೆ.**

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿರವರು ಸಭೆಗೆ ಮೊದಲು ವಂದಿಸಿ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಿಂಡಿಕೇಟ್ ಸಭೆಗೆ ಆಹ್ವಾನಿಸುತ್ತಾ ಸಭೆಯಲ್ಲಿ ಮಂಡಿಸಲಾಗಿರುವ 2021-22ನೇ ಸಾಲಿನ

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಬಜೆಟನ್ನು ಕೂಲಂಕುಷವಾಗಿ ಪರಿಶೀಲಿಸಿ ಅವರುಗಳ ಅಮೂಲ್ಯವಾದ ಸಲಹೆಗಳು ಮತ್ತು ಅನುಮೋದನೆಯನ್ನು ನೀಡಬೇಕೆಂದು ಕೋರಿದರು

(i) ಮಾನ್ಯ ಸದಸ್ಯರಾದ ಶ್ರೀ ಆರ್ ಕೆ ಚಂದ್ರನಾಥರವರು ಸಭೆಯ ಪ್ರಾರಂಭದಲ್ಲಿ ಮಾತನಾಡುತ್ತ ಹಿಂದಿನ ಸಭೆಯಲ್ಲಿ ಸದಸ್ಯರೊಬ್ಬರು ಮಾತನಾಡಿದ ವಿಷಯದ ಮೇಲೆ ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದರು. ಈ ಕ್ರಿಯಾಲೋಪದ ಅಡಿಯಲ್ಲಿ ಮಾತನಾಡುತ್ತ ವಿಶ್ವವಿದ್ಯಾನಿಲಯದ ಉನ್ನತಿಗಾಗಿ ಕಾರ್ಯನಿರ್ವಹಿಸಲು ಸಿಂಡಿಕೇಟ್ ಸದಸ್ಯರನ್ನು ಸರ್ಕಾರ ನೇಮಿಸಿರುವುದಾಗಿ ತಿಳಿಸುತ್ತಾ ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್ ಪ್ರಮುಖ ಪಾತ್ರ ವಹಿಸುತ್ತದೆ. ಮತ್ತು ಸದಸ್ಯರುಗಳಿಗೆ ನಿರ್ಧಿಷ್ಠ ಮಾನ ದಂಡಗಳಿರುತ್ತವೆ. ಈ ಹಿಂದೆ ಹಲವಾರು ಉನ್ನತ ವ್ಯಕ್ತಿಗಳು ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿರುತ್ತಾರೆ ಅವರುಗಳು ಒಳ್ಳೆಯ ಬುನಾದಿ ಹಾಕಿರುತ್ತಾರೆ. ಈ ವಿಷಯದಲ್ಲಿ ಬಸವಣ್ಣನವರ ಹಿತವಚನವನ್ನು ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ಒಳ್ಳೆಯ ರೀತಿಯಲ್ಲಿ ವ್ಯಕ್ತಪಡಿಸಬೇಕೆ ಹೊರತು ಸಂಶಯ ವ್ಯಕ್ತಪಡಿಸಬಾರದು. ಸಂಸ್ಕಾರವಂತರಾಗಿ ಇರಬೇಕಾಗುತ್ತದೆ ಸದಸ್ಯರು ಅವರ ಬಗ್ಗೆ ಹೇಳಿರುವುದನ್ನು ಖಂಡಿಸುವುದಾಗಿ ತಿಳಿಸುತ್ತಾ ಸಂವಿಧಾನಬದ್ದರಾಗಿ ನಡೆದುಕೊಳ್ಳಬೇಕು ಎಂದು ಅವರ ಅಭಿಪ್ರಾಯವನ್ನು ಹೇಳಿದರು.

ಕುಲಪತಿಗಳು ಮಾತನಾಡುತ್ತಾ, ಈಗಾಗಲೇ ಆಗಿರುವುದನ್ನು ಮುಂದುವರೆಸುವುದು ಬೇಡ, ಹಿರಿಯರು ಸಲಹೆಗಳನ್ನು ತಿಳಿಸಿ ಹೇಳಿದರೆ ಅದನ್ನು ಅರ್ಥ ಮಾಡಿಕೊಳ್ಳಬೇಕು ಸಿಂಡಿಕೇಟ್ ಸದಸ್ಯರು ಸಭೆಯ ಗೌರವವನ್ನು ಕಾಪಾಡಿಕೊಳ್ಳಬೇಕು. ಈ ಹಿಂದೆ ವಿಶ್ವವಿದ್ಯಾನಿಲಯಗಳಲ್ಲಿ ಚುನಾಯಿತ ಸದಸ್ಯರುಗಳು ಇದ್ದ ಸಂದರ್ಭದಲ್ಲಿ ಸದಸ್ಯರುಗಳು ಅವರ ಸಹ ಸದಸ್ಯರುಗಳಿಗೆ ಒಳ್ಳೆಯ ಗೌರವ ನೀಡುತ್ತಿದ್ದರು. ಸಿಂಡಿಕೇಟ್ ಸದಸ್ಯರುಗಳು ಸಹ ಸದಸ್ಯರುಗಳಿಗೆ ಗೌರವ ನೀಡುವುದನ್ನು ಕಲಿತುಕೊಳ್ಳಬೇಕು ಸದಸ್ಯರುಗಳು ಸಭೆಯಲ್ಲಿ ಅಸಂಬದ್ಧ ಪದಗಳನ್ನು ಬಳಸಬಾರದು ಎಂದು ಅಭಿಪ್ರಾಯಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯರವರು ಮಾತನಾಡುತ್ತ, ಸದಸ್ಯರಾದ ಶ್ರೀ ಚಂದ್ರನಾಥ್ ರವರ ಅಭಿಪ್ರಾಯಕ್ಕೆ ರೂಲಿಂಗ್ ನೀಡಲು ಆಗ್ರಹಿಸಿದರು.

ಮಾನ್ಯ ಕುಲಪತಿಗಳು ಮಾತನಾಡುತ್ತ ಇನ್ನು ಮುಂದೆ ಈ ರೀತಿ ಆಗದಂತೆ ಕ್ರಮವಹಿಸುವುದು ಒಳ್ಳೆಯದು ಇಲ್ಲವಾದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ಜರುಗಿಸಬೇಕಾಗುತ್ತದೆ, ಈ ಸಭೆಯ ಎಲ್ಲಾ ಸದಸ್ಯರು ಅವರವರ ಇತಿ ಮಿತಿಗಳನ್ನು ಅರಿತು ಮಾತನಾಡಬೇಕು ಎಂದು ಸೂಚಿಸಿದರು.

ಮಾನ್ಯ ಸದಸ್ಯರಾದ ಶ್ರೀ ಚಿಕ್ಕಮುನಿಯಪ್ಪರವರು ಸಹ ಕುಲಪತಿಗಳ ಅಭಿಪ್ರಾಯವನ್ನು ಒಪ್ಪುವುದಾಗಿ ಅವರ ಅನುಮೋದನೆ ಸೂಚಿಸಿದರು.

(ii) ಮಾನ್ಯ ಕುಲಪತಿಗಳು ಮಾತನಾಡುತ್ತ ಈ ಹಿಂದೆಯೆ ಬಜೆಟ್ ಮಂಡನೆಯಾಗಬೇಕಿತ್ತು. ಅಂದರೆ ಸರ್ಕಾರದ ಬಜೆಟ್‌ನಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಅನುದಾನ ದೊರೆಯಬಹುದು ಎಂಬ ನೀರಿಕ್ಷೆಯಲ್ಲಿ

ಬಜೆಟ್‌ನ್ನು ರಾಜ್ಯ ಬಜೆಟ್‌ನ ನಂತರದಲ್ಲಿ ತಯಾರಿಸಲು ನಿರ್ಧರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಬಜೆಟ್‌ನ್ನು ಮಂಡಿಸಲು ವಿಳಂಬವಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ವಿತ್ತಾಧಿಕಾರಿಗಳಿಗೆ ಬಜೆಟ್ ಮಂಡನೆ ಮಾಡಲು ಸೂಚಿಸಿದರು. ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯ ಅವರು ವಿತ್ತಾಧಿಕಾರಿಗಳು ಬಜೆಟ್ ಮಂಡಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ ಎಂದು ಅವರ ಆಕ್ಷೇಪಣೆಯನ್ನು ಸೂಚಿಸಿದರು. ಶ್ರೀ ಅರವಿಂದ್ ಅವರು ಮಾತನಾಡುತ್ತ ಸಿಂಡಿಕೇಟ್ ಸಭೆಯಲ್ಲಿ ಮೂವರು ಅಧಿಕಾರಿಗಳಿಗೆ ಮಾತ್ರ ಸ್ಥಾನ ನೀಡಲಾಗಿದೆ ವಿತ್ತಾಧಿಕಾರಿಗಳು ಅಗತ್ಯ ಇದ್ದಾಗ ಮಾತ್ರ ಪ್ರಶ್ನೆಗೆ ಉತ್ತರ ನೀಡಲು ಅವಕಾಶವಿರುತ್ತದೆ. ಅಧ್ಯಕ್ಷರಾಗಲಿ ಕುಲಸಚಿವರಾಗಲಿ ಬಜೆಟ್ ಪ್ರಸ್ತಾವನೆಯನ್ನು ಮಂಡಿಸಲಿ ಎಂದು ಅವರ ಅಭಿಪ್ರಾಯವನ್ನು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಆರ್ ಕೆ ಚಂದ್ರನಾಥ ರವರು ಮಾತನಾಡುತ್ತ ಹಣಕಾಸು ಸಮಿತಿಯಲ್ಲಿ ಶ್ರೀಮತಿ ಉಮಾ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಹಾಗೂ ಗುರುರಾಜಾ ರಾವ್ ಹೆಚ್ಚುವರಿ ನಿರ್ದೇಶಕರು, ಯೋಜನಾ ಇಲಾಖೆ ಅವರುಗಳು ಭಾಗವಹಿಸಿ ಕೆಲವು ಸಲಹೆ ಸೂಚನೆ ಮಾರ್ಗದರ್ಶನಗಳೊಂದಿಗೆ ಸದರಿ ಬಜೆಟ್ ತಯಾರಿಸಿರುವ ಶಾಸನಬದ್ಧ ಅಧಿಕಾರಿಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದ ಬಗ್ಗೆ ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು.

ನಂತರ ಮಾನ್ಯ ಕುಲಪತಿಗಳು 2021–22ನೇ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಬಜೆಟ್ ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸಿದರು.

(iii) ಮಾನ್ಯ ಸದಸ್ಯರಾದ ಶ್ರೀನಿವಾಸಯ್ಯವರು ಮಾತನಾಡಿ ಫಿಕ್ಸೆಡ್ ಠೇವಣಿ ಬಗೆಗೆ 2020–21 ರಲ್ಲಿ 90.00 ಕೋಟಿ ಇದ್ದು, ಇದು 2021–22ಕ್ಕೆ 84 ಕೋಟಿ ತೋರಿಸಲಾಗಿದೆ ಕಡಿಮೆಯಾಗಿರುವ ಬಗೆಗೆ ವಿವರಣೆಯನ್ನು ನೀಡಲು ಕೋರಿದರು. ವಿತ್ತಾಧಿಕಾರಿಗಳು ಉತ್ತರಿಸುತ್ತಾ ರೂ.90.31 ಕೋಟಿ ಮೊತ್ತವು ಈ ಹಿಂದಿನ 3 ವರ್ಷಗಳಲ್ಲಿ ಉಳಿಸಿದ ಮೊತ್ತವಾಗಿರುತ್ತದೆ. 2019–20ನೇ ಸಾಲಿನಲ್ಲಿ ಬಳಕೆಯಾಗದೆ ಉಳಿದ ಮೊತ್ತ ರೂ.90–31 ಕೋಟಿ ಎಂಬುದಾಗಿ 2020–21ನೇ ಬಜೆಟ್‌ನಲ್ಲಿ ತೋರಿಸಲಾಗಿದೆ. 2020–21ನೇ ಸಾಲಿನಲ್ಲಿ ಲಭ್ಯವಿರುವ ರೂ.84–00 ಕೋಟಿ ಮೊತ್ತವನ್ನು ಠೇವಣಿ ಇಡಲಾಗಿದೆ ಎಂಬುದಾಗಿ ಸಭೆಗೆ ತಿಳಿಸಿದರು. ಹಿಂದಿನ ವರ್ಷ ಕೋವಿಡ್‌ನಿಂದ ವಿಶ್ವವಿದ್ಯಾಲಯಕ್ಕೆ ಕಾಲೇಜುಗಳಿಂದ ಶುಲ್ಕ ಬಾಬ್ತು ಇನ್ನೂ ಬಾಕಿ ಬರಬೇಕಾಗಿರುತ್ತದೆ. ಸ್ನಾತಕ ಕೋರ್ಸುಗಳ ಪ್ರವೇಶ ಅನುಮೋದನೆ ಶುಲ್ಕ ಸಹ ಬರಬೇಕಾಗಿದೆ ಎಂದು ಸಭೆಗೆ ತಿಳಿಸಿದರು

(iv) ಸಂಬಳ ಹಾಗೂ ಅಭಿವೃದ್ದಿ ಅನುದಾನಗಳ ಬಗ್ಗೆ ಸ್ಪಷ್ಟೀಕರಣ ನೀಡಲು ಸದಸ್ಯರೊಬ್ಬರು ಕೋರಲಾಗಿ, ವಿತ್ತಾಧಿಕಾರಿಗಳು ಸರ್ಕಾರದಿಂದ ಸಂಬಳಕ್ಕೆ ಹಾಗೂ ಅಭಿವೃದ್ಧಿ ಗ್ರ್ಯಾಂಟ್ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಯಾವುದೇ ಗ್ರ್ಯಾಂಟ್ ಇರುವುದಿಲ್ಲ. 12ಬಿ ಅಡಿಯಲ್ಲಿ ಅನುದಾನ ಪಡೆಯಲು ನಿಯಮಾವಳಿ ಪಾಲನೆ ಆಗಬೇಕು ಎಂದು ಸಭೆಗೆ ತಿಳಿಸಿದರು.

(v) ಒಂದು ಹಂತದಲ್ಲಿ **ಹಂತದಲ್ಲಿ** ಸದಸ್ಯರಾದ ಶ್ರೀ ಶ್ರೀನಿವಾಸಯ್ಯ ಅವರು ಮಾತನಾಡಿ ಸಿಂಡಿಕೇಟ್ ಅನುಮೋದನೆ ಪಡೆಯದೆ ಕೆಲವು ಕಾಮಗಾರಿಗಳಿಗೆ ಹಣ ಪಾವತಿ ಮಾಡಿರುವ ಬಗೆಗೆ ಆಕ್ಷೇಪಣೆ ವ್ಯಕ್ತಪಡಿಸಿದರು. ಕುಲಪತಿಗಳು ಮಾತನಾಡಿ, ಸದರಿ ವಿಷಯವನ್ನು ಸಿಂಡಿಕೇಟ್ ಗಮನಕ್ಕೆ ತರಲಾಗಿದೆ. ಲೋಕೋಪಯೋಗಿ ಇಲಾಖೆಗೆ ಸಲ್ಲಿಸಲಾಗಿದ್ದು, ಅಲ್ಲಿ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗದ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಗಳ ಅಡಿಯಲ್ಲಿ ಕೆಲಸ

ನಿರ್ವಹಿಸುತ್ತಿರುವ ಸಂಸ್ಥೆಯಿಂದ ತಪಾಸಣೆ ಮಾಡಿಸಲಾಗಿದೆ. ಕಾಮಗಾರಿ ಮೊತ್ತವು ರೂ.2.00 ಕೋಟಿ ಮೀರಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು

ಕುಲಪತಿಗಳು ಮಾತನಾಡುತ್ತಾ 2.00 ಕೋಟಿ ಮೀರಿದಲ್ಲಿ ಮಾತ್ರ 3ನೇ ವ್ಯಕ್ತಿಯಿಂದ ಪರಿಶೀಲನೆ ಮಾಡಿಸಬೇಕಾಗುತ್ತಿತ್ತು. ಈಗಾಗಲೇ ಸಾಕಷ್ಟು ವಿಳಂಬವಾದ ಮೇರೆಗೆ ಹಾಗೂ ತತ್ಸಂಬಂಧ ಬಡ್ಡಿ ಪಾವತಿಸುವ ಪ್ರಮೇಯ ಉಂಟಾಗುವ ಸಂಬಂವವಿದ್ದುದರಿಂದ ಜಿಲ್ಲಾಧಿಕಾರಿಗಳ ಕೋರಿಕೆಯಂತೆ ಪಾವತಿಸಲಾಗಿರುವುದಾಗಿ ಸಭೆಯ ಗಮನಕ್ಕೆ ತಂದರು.

(vi) ಮಾನ್ಯ ಸದಸ್ಯರಾದ ಶ್ರೀ ಸತೀಶ್ ಅವರು ಹೌಸ್ ಆರ್ಡರ್ಲಿ ಸಂಭಾವನೆ ಏನು ಎಂದು ವಿವರಿಸಲು ಕೋರಿದರು. ಅದಕ್ಕೆ ವಿತ್ತಾಧಿಕಾರಿಗಳು ಸರ್ಕಾರಿ ಅಧಿಕಾರಿಗಳಿಗೆ ಈ ಸೌಲಭ್ಯ ಒದಗಿಸಿದೆ. ಮಾಹೆಯಾನ ಕುಲಪತಿಗಳಿಗೆ 7000/- ಕುಲಸಚಿವರಿಗೆ 6000/- ಕುಲಸಚಿವರು ಮೌಲ್ಯಮಾಪನ ಅವರಿಗೆ 5000/- ಮತ್ತು ವಿತ್ತಾಧಿಕಾರಿಗಳಿಗೆ 3000/- ಎಂಬುದಾಗಿ ನಿಗಧಿಪಡಿಸಲಾಗಿದೆ ಎಂದರು.

(vii) ಮಾನ್ಯ ಸದಸ್ಯರಾದ ಡಾ. ವಿ. ಗಾಯತ್ರಿರವರು ರಸಾಯನಶಾಸ್ತ್ರ ವಿಭಾಗಕ್ಕೆ ಕಛೇರಿ ಸಾಧಿಲ್ವಾರು ರೂ. 1.20 ಲಕ್ಷ ನಿಗಧಿಪಡಿಸಿದ್ದು ಇದನ್ನು ರೂ. 1.80 ಲಕ್ಷಕ್ಕೆ ಹೆಚ್ಚಿಸಲು ಕೋರಿದರು.

**ನಿರ್ಣಯ:- ರಸಾಯನಶಾಸ್ತ್ರ ವಿಭಾಗಕ್ಕೆ ಕಛೇರಿ ಸಾಧಿಲ್ವಾರು ಮೊತ್ತ ರೂ. 1.20 ಲಕ್ಷದಿಂದ ರೂ. 1.80 ಲಕ್ಷಕ್ಕೆ ಹೆಚ್ಚಿಸಲು ಸಭೆಯು ನಿರ್ಣಯಿಸಿತು.**

(viii) ವಿಶ್ವವಿದ್ಯಾಲನಿಯದಲ್ಲಿ ಹೆಲ್ತ್ ಸೆಂಟರ್ ಅವಶ್ಯಕತೆ ಇರುವುದಾಗಿ ತಿಳಿಸುತ್ತಾ ಮಾನ್ಯ ಸದಸ್ಯರಾದ ಶ್ರೀ ಅರವಿಂದ್ ಅವರು ಆರೋಗ್ಯ ವಿಮೆ ಬಗೆಗೆ ಮಾತನಾಡಿ ವಿದ್ಯಾರ್ಥಿಗಳಿಗೆ ವಿಮೆ ಮಾಡಿಸುವ ಬಗ್ಗೆ ಕ್ರಮ ಜರುಗಿಸಲು ಕೋರಿದರು. ರಾಜೀವ್ ಗಾಂಧಿ ವಿಶ್ವವಿದ್ಯಾಲಯದಲ್ಲಿ ಈ ಬಗ್ಗೆ ಕ್ರಮ ಜರುಗಿಸಲಾಗಿದೆ ಎಂದರು. ವಿಮೆ ಬಗೆಗೆ ಪರಿಶೀಲಿಸಲಾಗುವುದು ಎಂದು ಕುಲಪತಿಗಳು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಅರವಿಂದ್ ಮತ್ತು ಶ್ರೀ ಸತೀಶ್ ಅವರು ಮಾತನಾಡಿ ಮುಂದಿನ ಸಭೆಯಲ್ಲಿ ಈ ಪ್ರಸ್ತಾಪವನ್ನು ಮಂಡಿಸಲು ಹಾಗೂ ಅಗತ್ಯ ಬಜೆಟ್ ಹಂಚಿಕೆ ಮಾಡಲು ಕೋರಿದರು.

**ನಿರ್ಣಯ:- ವಿದ್ಯಾರ್ಥಿಗಳ ಆರೋಗ್ಯ ವಿಮೆಗಾಗಿ ರೂ. 20.00 ಲಕ್ಷ ಅನುಧಾನ ಹಂಚಿಕೆ ಮಾಡಲು ಸಭೆಯು ನಿರ್ಣಯಿಸಿತು.**

(ix) ಮಿನಿ ಟ್ರಾಕ್ಟರ್ ಖರೀದಿ ಮತ್ತು ತೋಟನಿರ್ವಹಣೆಗಾಗಿ ಗೊಬ್ಬರ ಖರೀದಿ ಬಗ್ಗೆ ರೂ. 15.00 ಲಕ್ಷ ಹಂಚಿಕೆ ಮಾಡಿರುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಅವರು ಟ್ರಾಕ್ಟರ್ ಖರೀದಿ ಅತ್ಯವಶ್ಯಕವಾಗಿದ್ದು, ವಿಶ್ವವಿದ್ಯಾನಿಲಯದಲ್ಲಿ ಕಸ ವಿಲೇವಾರಿಗೆ ಇದರ ಅವಶ್ಯಕತೆ ಇದೆ ಆದುದರಿಂದ ಒಂದು ಟ್ರಾಕ್ಟರ್ ಖರೀದಿಗೆ ಬಜೆಟ್ ಹಂಚಿಕೆಯಾಗಿದೆ ಎಂದರು. ಸದರಿ ಟ್ರ್ಯಾಕ್ಟರ್ ಅನ್ನು ಪಾರ್ಕ್ ನಿರ್ವಹಣೆ ಬಳಕೆಗೂ ಅನುಕೂಲವಾಗುವ ಬಗ್ಗೆ ಶ್ರೀ ಚಿಕ್ಕಮುನಿಯಪ್ಪನವರು ಸಹಮತ ವ್ಯಕ್ತಪಡಿಸಿದರು.

(x) ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯ ಅವರು ಕಂಪ್ಯೂಟರ್ ಖರೀದಿ ಬಗೆಗೆ ವಿವರಣೆ ಕೋರಿದರು. 2020-21ನೇ ಸಾಲಿನಲ್ಲಿ 20 ಕಂಪ್ಯೂಟರ್‌ಗಳನ್ನು ಖರೀದಿಸಿ ಅದನ್ನು ಗಣಿತ ವಿಭಾಗ ಮತ್ತು ಸಂವಹನ ವಿಭಾಗಕ್ಕೆ ನೀಡಲಾಗಿದೆ ಎಂದು ಕುಲಪತಿಗಳು ತಿಳಿಸಿದರು.

(xi) ಶ್ರೀಮತಿ ಪದ್ಮಜಾ ಅವರು ವಾಣಿಜ್ಯ ವಿಭಾಗದಲ್ಲಿ ಸ್ಟಡೀ ಮೆಟೀರಿಯಲ್ಸ್ ಬಗ್ಗೆ ನೀಡಿರುವ ಅನುದಾನದ ಬಗೆಗೆ ವಿವರಗಳನ್ನು ಕೋರಿದರು. ವಿತ್ತಾಧಿಕಾರಿಗಳು ಸಂಬಂಧಪಟ್ಟ ವಿಭಾಗದಿಂದ ಪ್ರಸ್ತಾವನೆ ಸಲ್ಲಿಸಲಾದ ಮೇರೆಗೆ ಹಣ ನಿಗಧಿಗೊಳಿಸಿದೆ ಎಂದು ತಿಳಿಸಿದರು. ಕುಲಪತಿಗಳು ತತ್ಸಂಬಂಧ ಸ್ಪಷ್ಟೀಕರಣ ನೀಡಿದರು.

(xii) ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯ ಅವರು ಸೋಲಾರ್ ಉಪಯೋಗದ ಬಗೆಗೆ ಮಾತನಾಡಿ ಇದಕ್ಕೆ ಬಜೆಟ್‌ನಲ್ಲಿ ಅವಕಾಶ ಮಾಡಲು ಸೂಚಿಸಿದರು. ಸೋಲಾರ್ ಉಪಯೋಗದಿಂದ ಹೆಚ್ಚಿನ ಹಣ ಉಳಿಸಬಹುದು ಎಂದು ಅವರ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

**ನಿರ್ಣಯ:ಸಭೆಯು ಚರ್ಚಿಸಿ 2020-21ನೇ ಸಾಲಿನಲ್ಲಿ 125.00 ಲಕ್ಷಗಳನ್ನು ನಿಗಧಿಪಡಿಸಿದಂತೆ ಈ ವರ್ಷವೂ 2020-21ನೇ ಸಾಲಿಗೆ ರೂ.125.00 ಲಕ್ಷಗಳನ್ನು ಹಂಚಿಕೆ ಮಾಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.**

(xiii) ಸದಸ್ಯರಾದ ಶ್ರೀ ಹೆಚ್ ಆರ್ ಸತೀಶ್ ಅವರು ಮಾತನಾಡುತ್ತಾ ಈಗಿನ ಬಹುತೇಕ ಹಳೆಯ ಕಟ್ಟಡಗಳಲ್ಲಿ ಬಿರುಕು,ಶಿಥಿಲತೆ,ನೀರು ಸೋರುವಿಕೆ ಇತ್ಯಾದಿ ದೋಷಗಳು ಕಂಡು ಬರುತ್ತಿದ್ದು, ಮಳೆಗಾಲಕ್ಕೆ ಮುನ್ನವೇ ಸದರಿಯವುಗಳ ದುರಸ್ತಿ ಕಾರ್ಯ ಕೈಗೊಳ್ಳಬೇಕೆಂದು ಸೂಚಿಸಲಾಗಿ, ಮಾನ್ಯ ಕುಲಪತಿಗಳು ಮಾತನಾಡಿ ಈಗಿರುವ ಕಟ್ಟಡಗಳು ಬಹಳ ಹಳೆಯದಾಗಿದ್ದು ಶಿಥಿಲಗೊಂಡಿರುವ ಬಗ್ಗೆ ಪ್ರಸಕ್ತ ಸಾಲಿನಲ್ಲಿ ಅನುದಾನ ಹಂಚಿಕೆಯಾಗಿದ್ದು, ಈ ಬಗ್ಗೆ ಮುಂದೆ ಕ್ರಮ ಜರುಗಿಸಲಾಗುತ್ತದೆಂದರು.

ಇದೇ ರೀತಿ ನೀರಿನ ಬಿಲ್ಲುಗಳ ವೆಚ್ಚಗಳ ಪಾವತಿ ಬಗೆಗೆ ಮಾತನಾಡಿ ಕುಲಪತಿಯವರು ಒಟ್ಟಾರೆಯಾಗಿ ಹಣ ಪಾವತಿಸಲಾಗುತ್ತಿದೆ ಯಾವುದಕ್ಕೂ ಮೀಟರ್ ಅಳವಡಿಕೆ ಇರುವುದಿಲ್ಲ. ಮೀಟರ್ ಅಳವಡಿಸುವ ಬಗ್ಗೆ ಸಂಬಂಧಿಸಿದ ಸಂಸ್ಥೆಯೊಂದಿಗೆ ಚರ್ಚಿಸಿ ಕ್ರಮಕ್ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

(xiv) ಮಾನ್ಯ ಸದಸ್ಯರಾದ ಶ್ರೀ ಅರವಿಂದ ಅವರು ಮಾತನಾಡಿ ಎಲ್ಐಸಿ ಸಮಿತಿಗಳಿಗೆ ಹಣ ಪಾವತಿಸಲಾಗಿರುವ ಬಗೆಗೆ ವಿವರ ಕೋರಿದರು. ಈ ಹಿಂದಿನ ವರ್ಷದ ಎಲ್ಐಸಿ ಸಮಿತಿಗಳಿಗೆ ಸಂಬಂಧಿಸಿದಂತೆ ಹಣ ಪಾವತಿಸಲಾಗಿದೆ. 2020-21ನೇ ಸಾಲಿನ ಎಲ್ಐಸಿ ಸಮಿತಿಗಳಿಗೆ ಹಣ ಪಾವತಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆಂದು ಕುಲಪತಿಗಳು ಸಭೆಯ ಗಮನಕ್ಕೆ ತಂದರು.

(xv) ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯ ಅವರು ಮಾತನಾಡಿ ಸಿಂಡಿಕೇಟ್ ಸದಸ್ಯರುಗಳಿಗೆ ಪ್ರಯಾಣ ಭತ್ಯೆ/ದಿನಭತ್ಯೆ ಹಂಚಿಕೆಯನ್ನು ಹೆಚ್ಚಿಸಲು ಕೋರಿದರು.

**ನಿರ್ಣಯ:ಸಿಂಡಿಕೇಟ್ ಸದಸ್ಯರ ಪ್ರಯಾಣ/ದಿನ ಭತ್ಯೆಗಳಿಗೆ ನಿಗಧಿಪಡಿಸಿರುವ ರೂ.15.00 ಲಕ್ಷವನ್ನು ರೂ.20.00 ಲಕ್ಷಗಳಿಗೆ ಏರಿಸಲು ಸಭೆಯು ನಿರ್ಣಯಿಸಿತು.**

(xvi) ಮಾನ್ಯ ಸದಸ್ಯರಾದ ಶ್ರೀ ಅರವಿಂದ್ ಅವರು ಮಾತನಾಡಿ ವಿವೇಕಾನಂದ ಸ್ಟಡೀ ಸೆಂಟರ್ ಮಾಡಲು ಸೂಚಿಸಿದರು. ಸ್ಟಡೀ ಸೆಂಟರ್ ಮಾಡಲು ಸಾಕಷ್ಟು ಜಾಗ ಇರುವುದಿಲ್ಲ. ಕುಲಪತಿಗಳು/ಸಭಾಧ್ಯಕ್ಷರು ಈ ಬಗ್ಗೆ ಪರಿಶೀಲಿಸಬೇಕಾಗುತ್ತದೆಂದು ತಿಳಿಸಲಾಯಿತು, ಮುಂದುವರೆದು ಕ್ರೀಡಾ ಶುಲ್ಕದಲ್ಲಿ ಶೇಕಡ 70% ವಿಶ್ವವಿದ್ಯಾಲಯಕ್ಕೆ ಮತ್ತು ಶೇಕಡ 30% ಕಾಲೇಜಿಗೆ ಉಪಯೋಗಿಸಲು ನಿಗಧಿಪಡಿಸಿದೆ. ಕಾಲೇಜುಗಳು ಶೇಕಡ 30% ಕ್ರೀಡಾ ಚಟುವಟಿಕೆಗಳಿಗೆ ವಿನಿಯೋಗಿಸುತ್ತಿರುವ ಬಗ್ಗೆ ಪರಿಶೀಲಿಸಲಾಗುತ್ತದೆಂದು ತಿಳಿಸಲಾಯಿತು.

(xvii) ಮಾನ್ಯ ಸದಸ್ಯರಾದ ಶ್ರೀನಿವಾಸಯ್ಯ ಅವರು ಮಾತನಾಡಿ ಯಾವುದೇ ಜಾಹಿರಾತು/ಪ್ರಕಟಣೆ ನೀಡದರೂ ಎಲ್ಲಾ ಸಿಂಡಿಕೇಟ್ ಮೆಂಬರ್‌ಗಳಿಗೆ ಮಾಹಿತಿ ಕಳುಹಿಸಲು ಕೋರಿದರು. ಈ ಬಗ್ಗೆ ಕುಲಸಚಿವರು ಮಾತನಾಡುತ್ತಾ ಬೆಂಗಳೂರು ನಗರ ವಿಶ್ವವಿದ್ಯಾಲಯ ವೆಬ್ ಸೈಟ್ ಹಾಗೂ ವಿಶ್ವವಿದ್ಯಾಲಯ ಕಛೇರಿಗಳ ಪ್ರಕಟಣಾ ಫಲಕಗಳಲ್ಲಿ ಪ್ರಕಟಿಸಲಾಗುತ್ತಿರುತ್ತದೆಂಬುದಾಗಿ ಸಭೆಗೆ ತಿಳಿಸಿದರು.

(xviii) ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯ ಅವರು ಐಸಿಟಿ ಅಡಿ ಮಾಡಲಾಗುತ್ತಿರುವ ಬಗೆಗೆ ಮಾಹಿತಿ ಕೋರಿದರು. ಕುಲಪತಿಗಳು ಮಾತನಾಡಿ ಎಲ್ಲಾ ವಿಭಾಗಳಲ್ಲಿ ಲಾನ್ ಇತ್ಯಾದಿಗಳನ್ನು ಅಳವಡಿಸಲಾಗಿದೆ ಮತ್ತು ಸದರಿ ಸಾಲಿನಲ್ಲಿ ಕಂಪ್ಯೂಟರ್ ಲ್ಯಾಬ್ ಇತ್ಯಾದಿಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

(xix) 2020-21 ನೇ ಸಾಲಿನ ಖರ್ಚು-ವೆಚ್ಚಗಳನ್ನು ನಿರ್ಧರಿಸಲು Provisional A/c Statement ಮಾಡಿಕೊಳ್ಳಬೇಕಾಗಿದ್ದು ಸೂಕ್ತ ಕ್ರಮವಾಗಿತ್ತು ಎಂದು ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಸೂಚಿಸಿದರು. ಪ್ರಾವಿಷನ್ ಲೆಕ್ಕ ಪತ್ರ ತಯಾರಿಗಾಗಿ ಯಾವುದೇ Accounting Software(FBAS) ಅಳವಡಿಸಿಕೊಂಡಿರುವುದಿಲ್ಲ ಹಾಗೂ ಲೆಕ್ಕ ಪತ್ರ ತಯಾರಿಕೆಗೆ ನುರಿತ /ನಿಪುಣ ಸಿಬ್ಬಂದಿವರ್ಗ ಇಲ್ಲದಿರುವುದರಿಂದ ಈ ಹಿಂದಿನ 4 ವರ್ಷಗಳಲ್ಲಿ ತಯಾರಿಸಲಾದಂತೆ ವಹಿಗಳು, ಕಂಪ್ಯೂಟರ್ ಎಂಟ್ರಿಗಳು, ಕಡತಗಳು ಹಾಗೂ ಬ್ಯಾಂಕ್ ಸ್ಟೇಟ್‌ಮೆಂಟಗಳನ್ನು ಆದರಿಸಿ ಖರ್ಚುವೆಚ್ಚಗಳನ್ನು ನಿರ್ಧರಿಸಲಾಗಿದೆಯೆಂದು ವಿತ್ತಾಧಿಕಾರಿಗಳು ಸಭೆಗೆ ತಿಳಿಸಿ ಮುಂದಿನ ಬಜೆಟ್‌ಗೆ ಸೂಕ್ತ Accounting Software(FBAS) ಅಳವಡಿಸಿಕೊಂಡು Provisional A/c Statement ತಯಾರಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

(xx) ಔಟ್ರೀಚ್ ಪ್ರೊಗ್ರಾಂ ಅಡಿಯಲ್ಲಿ ಮಾತನಾಡಿ ಹಳ್ಳಿ ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು. ಈ ಬಗೆಗೆ ಕ್ರಮ ಕೈಗೊಳ್ಳುವುದಾಗಿ ಕುಲಪತಿಗಳು ಸಭೆಗೆ ತಿಳಿಸಿದರು. "ನೂತನ ಶಿಕ್ಷಣ ನೀತಿ" ( NEP) ಯೋಜನೆಗೆ ಪ್ರತ್ಯೇಕವಾಗಿ ಹೆಚ್ಚಿನ ಹಣ ಹಂಚಿಕೆ ಮಾಡುವಂತೆ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್‌ರವರು ಕೋರಿದರು.

**ನಿರ್ಣಯ: "ನೂತನ ಶಿಕ್ಷಣ ನೀತಿ"(NEP) ಯೋಜನೆಗೆ ರೂ. 25.00 ಲಕ್ಷ ಹಂಚಿಕೆ ಮಾಡಲು ಸಭೆಯು ನಿರ್ಣಯಿಸಿತು.**

(xxi) ಮಾನ್ಯ ಸದಸ್ಯರಾದ ಶ್ರೀ ಅರವಿಂದ ಹೆಚ್.ಟಿ. ಅವರು ಮಾತನಾಡಿ ವಿದ್ಯಾರ್ಥಿಗಳ ಕುಂದುಕೊರತೆ ಕೋಶ ಸ್ಥಾಪಿಸಲು (ಗ್ರಿವೆನ್ಸ್ ಸೆಲ್) ಪ್ರಾವಿಷನ್ ಮಾಡಿ ಬಜೆಟ್ ಅಲೋಕೇಷನ್ ಮಾಡಲು ಸೂಚಿಸಿದರು.

**ನಿರ್ಣಯ:ವಿದ್ಯಾರ್ಥಿಗಳ ಕುಂದುಕೊರತೆ ಕೋಶ ಸ್ಥಾಪಿಸಲು (ಗ್ರೆವೆನ್ಸ್ ಸೆಲ್) ಕಾರ್ಯಕ್ರಮಗಳಿಗೆ ರೂ.5.00 ಲಕ್ಷ ಹಂಚಿಕೆ ಮಾಡಲು ಸಭೆಯು ನಿರ್ಣಯಿಸಿತು.**

**ನಿರ್ಣಯ: ಒಟ್ಟಾರೆ ಹಣಕಾಸು ಸಮಿತಿ ಸಭೆಯ ನಿರ್ಣಯ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯಗಳನ್ನು ಅಳವಡಿಸಿಕೊಳ್ಳುವ ನಿಬಂಧನೆಗಳೊಂದಿಗೆ 2021-22ನೇ ಸಾಲಿನ ಆಯವ್ಯಯ ಪತ್ರವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

ವಿಷಯ ಸಂಖ್ಯೆ:2 ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪಾವತಿಗಳಿಗೆ ಪ್ರತ್ಯೇಕ ಎಸ್‌ಬಿ ಖಾತೆ ಸಂ: 05190100018148 ಅನ್ನು ಬ್ಯಾಂಕ್ ಆಫ್ ಬರೋಡಾದಲ್ಲಿ ತೆರೆಯಲಾಗಿರುವ ಬಗ್ಗೆ –

******

ವಿತ್ತಾಧಿಕಾರಿಗಳು ವಿಶ್ವವಿದ್ಯಾಲಯದಿಂದ ವಿವಿದ ಬಾಬ್ತುಗಳಿಗೆ ಹಣ ಸಂದಾಯ ಮಾಡುವ ಬಗೆಗೆ ಹೊಸ ಖಾತೆಯನ್ನು ತೆರೆದಿರುವ ಬಗೆಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕೋರಿದರು. ಶ್ರೀ ಶ್ರೀನಿವಾಸಯ್ಯ ಅವರು ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಖಾತೆಗಳು ಇವೆ ಎಂಬ ಬಗ್ಗೆ ಮಾಹಿತಿ ಕೋರಿದರು. ವಿತ್ತಾಧಿಕಾರಿಗಳು 14 ಖಾತೆ ಇದ್ದು, ಎಸ್‌ಬಿಐ ನಲ್ಲಿ 9 ಮತ್ತು ಬ್ಯಾಂಕ್ ಆಫ್ ಬರೋಡಾದಲ್ಲಿ 5 ಖಾತೆ ಇದೆ ಎಂದು ತಿಳಿಸಿದರು. ಖಾತೆಗಳನ್ನು ತೆರೆಯುವ ಉದ್ದೇಶವನ್ನು ವಿತ್ತಾಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು. ದಿನಾಂಕ 26.03.2021ರಂದು ನಡೆದ 6ನೇ ಹಣಕಾಸು ಸಮಿತಿ ಸಭೆಯಲ್ಲಿ ಖಾತೆ ಸಂಖ್ಯೆ 05190100018148 ಅನ್ನು ಬ್ಯಾಂಕ್ ಆಫ್ ಬರೋಡಾದಲ್ಲಿ ತೆರೆಯಲಾಗಿರುವುದನ್ನು ಘಟನೋತ್ತರವಾಗಿ ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಕೋರಲಾಯಿತು.

ನಿರ್ಣಯ: ದಿನಾಂಕ 26.03.2021 ರಂದು ನಡೆದ 6ನೇ ಹಣಕಾಸು ಸಮಿತಿ ಸಭೆ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.

ವಿಷಯ ಸಂಖ್ಯೆ 3:ಬೆಂಗಳೂರು ನಗರ ವಿಶ್ವವಿದ್ಯನಿಲಯದಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಜಿ ಪಿ ಎಫ್/ಇಜಿಐಎಸ್ /ಎನ್ ಪಿ ಎಸ್/ನಿವೃತ್ತಿ ಕೊಡುಗೆ ಮುಂತಾದವುಗಳನ್ನು ಠೇವಣಿ ಇರಿಸಲು ಎಸ್‌ಬಿಐ ನಲ್ಲಿ 4 ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ತೆರೆಯುವ ಬಗ್ಗೆ

ನಿರ್ಣಯ: ಹಣಕಾಸು ಸಮಿತಿಯ ನಿರ್ಣಯವನ್ನು ಸಿಂಡಿಕೇಟ್ ಸಭೆ ಅನುಮೋದಿಸಿತು

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಖಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿ ವರ್ಗದವರು ಈ ಹಿಂದೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಇವರುಗಳ ಜಿ.ಪಿ.ಎಫ್, ಇ.ಜಿ.ಐ.ಎಸ್. ಎನ್.ಪಿ.ಎಸ್, ನಿವೃತ್ತಿ ಕೊಡುಗೆ ಮುಂತಾದವುಗಳನ್ನು ಪ್ರತ್ಯೇಕ "ಖಾತೆ" ತೆರೆದು ಅದರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯವೇ ನಿರ್ವಹಿಸುತ್ತಿತ್ತು. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಬ್ಬಂದಿಯ ಮೇಲ್ಕಂಡ ಕಟಾವುಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲು ಬ್ಯಾಂಕ್ ಖಾತೆಗಳನ್ನು ತೆರೆಯಲು ದಿನಾಂಕ 26.03.2021ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದು, ಅದರ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿ ಅನುಮೋದನೆಗೆ ಕೋರಲಾಯಿತು.

ನಿರ್ಣಯ: ದಿನಾಂಕ 26.03.2021 ರಂದು ನಡೆದ 6ನೇ ಹಣಕಾಸು ಸಮಿತಿ ಸಭೆ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು

ವಿಷಯ ಸಂಖ್ಯೆ: 4: ದೈಹಿಕ ಶಿಕ್ಷಣ ವಿಭಾಗಕ್ಕೆ ಕ್ರೀಡಾ ಚಟುವಟಿಕೆಗಳು ಹಾಗೂ ಇತ್ಯಾಧಿ ವೆಚ್ಚಗಳಿಗಾಗಿ ನಿರ್ದೇಶಕರು ದೈಹಿಕ ಶಿಕ್ಷಣ ವಿಭಾಗ, ರವರಿಗೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವ ಬಗ್ಗೆ:

*****

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 06 ವಿಭಾಗಳಿಗೆ ಈಗಾಗಲೇ ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದ್ದು, ಅದರಂತೆ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರ ಹೆಸರಲ್ಲಿ ಕ್ರೀಡಾ ಚಟುವಟಿಕೆಗಳು ಹಾಗೂ ಇತ್ಯಾದಿ ವೆಚ್ಚಗಳಿಗಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ಬ್ಯಾಂಕ್ ಆಫ್ ಬರೋಡಾದಲ್ಲಿ ತೆರೆಯಲು ಹಣಕಾಸು ಸಮಿತಿ ಸಭೆಯ ಮುಂದೆ ಅನುಮೋದನೆ ಕೋರಿ ಮಂಡಿಸಲಾಗಿ, ಸಭೆಯು ಈ ಹಿಂದೆ 06 ವಿಭಾಗಳಿಗೆ ಬ್ಯಾಂಕ್ ಖಾತೆಗಳನ್ನು ತೆರೆದಿರುವ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಇದೆಯೇ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಲು ತಿಳಿಸಲಾಗಿತ್ತು. ವಿತ್ತಾಧಿಕಾರಿಗಳು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು , ಉನ್ನತ ಶಿಕ್ಷಣ ಇಲಾಖೆ ರವರ ಪತ್ರ ಕ್ರ್ಮಾಂಕ:ಇಡಿ 350 ಯುಬಿವಿ ದಿನಾಂಕ 04.11.2016 ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಮಾಲೋಚಿಸಿ ಅವಶ್ಯಕ ಕ್ರಮ ವಹಿಸುವಂತೆ ತಿಳಿಸಿರುವ ಮೇರೆಗೆ ಸದರಿ ವಿಶ್ವವಿದ್ಯಾನಿಲಯ್ದಲ್ಲಿ ಅಳವಡಿಸಿಕೊಂದಿರುವಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲೂ ಸಹ ಅದೇ ವ್ಯವಸ್ಥೆಯನ್ನು ಅಲವಡಿಸಿಕೊಂಡಿರುವುದಾಗಿ ಸಭೆಗೆ ತಿಳಿಸಿದರು.

**ನಿರ್ಣಯ: ದಿನಾಂಕ 26.03.2021 ರಂದು ನಡೆದ 6ನೇ ಹಣಕಾಸು ಸಮಿತಿ ಸಭೆ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.**

ಹೊಸ ಶಿಕ್ಷಣ ಪದ್ಧತಿಯಡಿಯಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ಸೂಚಿಸಲಾಯಿತು. ಈ ನಿಟ್ಟಿನಲ್ಲಿ ಸ್ಕಿಲ್ ಡೆವಲಪ್‌ಮೆಂಟ್ ಸೆಮಿನಾರ್ ಗಳನ್ನು ಮಾಡಲು ಶ್ರೀಮತಿ ಪದ್ಮಜಾ ಸೂಚಿಸಿದರು. ಕುಲಪತಿಗಳು ಕ್ರಮ ಜರುಗಿಸುವುದಾಗಿ ತಿಳಿಸಿದರು.

ಶ್ರೀಮತಿ ಜ್ಯೋತಿ ವಿಜಯ ಅವರು ಮಾತನಾಡಿ ಸಿಂಡಿಕೇಟ್‌ನಿಂದ ಸದಸ್ಯರನ್ನು ಹಣಕಾಸು ಸಮಿತಿಗೆ ಸದಸ್ಯರನ್ನಾಗಿ ನೇಮಿಸಬೇಕಾಗಿದೆ ಎಂದರು. ಕುಲಪತಿಯವರು ಕ್ರಮಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಕುಲಪತಿಗಳು ಶ್ರೀಮತಿ ಜ್ಯೋತಿ ವಿಜಯ ಅವರಿಗೆ ಒಂದು ಸಮಿತಿ ಜವಾಬ್ದಾರಿಯನ್ನು ನೀಡಲಾಗಿದೆ. ಪರಿಶೀಲಿಸಿ ವರದಿ ನೀಡುವಂತೆ ಕೋರಿದರು. ಆದರೆ ಶ್ರೀಮತಿ ಜ್ಯೋತಿ ವಿಜಯ ಅವರು ಈ ಜವಬ್ದಾರಿಯನ್ನು ಒಪ್ಪಲು ಸ್ಯಾಧ್ಯವಾಗುತ್ತಿಲ್ಲವೆಂದು ತಿಳಿಸಿ ಈ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಿ ಎಂದು ತಿಳಿಸಿದರು.

ಒಟ್ಟಾರೆಯಾಗಿ ತಯಾರಾದ ಬಜೆಟ್‌ನ್ನು ಅನುಮೋದಿಸಿದರು

ನಂತರ ಕುಲಸಚಿವರು ಎಲ್ಲಾ ಸದಸ್ಯರುಗಳಿಗೆ ಧನ್ಯವಾದಗಳನ್ನು ಅರ್ಪಿಸುವುದರೊಂದಿಗೆ ಸಭೆ ಮುಕ್ತಾಯವಾಯಿತು.

ಕುಲಸಚಿವರು ~~ಹಾಗೂ~~
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು
12/04/2021